ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 19/2/20

ಆಕ್ರೋಶ ಗುಲಾಮಗಿರಿಯಿಂದ ಬಿಎಸ್‌ವೈ ವಿಮೋಚನೆ ಎಂದ ನಡಹಳ್ಳಿ

# ಹೈ-ಕ ಗುಲಾಮಗಿರಿ ಹೇಳಿಕೆಗೆ ಪ್ರತಿಪಕ್ಷಗಳು ಕೆಂಡಾಮಂಡಲ

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

'ಹೈದರಾಬಾದ್-ಕರ್ನಾಟಕಕ್ಕಿದ್ದ ಗುಲಾಮಗಿರಿ ಕಳಂಕವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮುಕ್ತಗೊಳಿಸಿದ್ದಾರೆ' ಎಂದು ಬಿಜೆಪಿ ಸದಸ್ಯ ಎ.ಎಸ್. ಪಾಟೀಲ ನಡಹಳ್ಳಿ ಹೇಳಿಕೆಗೆ ಸದನದಲ್ಲಿ ಪ್ರತಿಪಕ್ಷಗಳು ಕೆಂಡಾಮಂಡಲಗೊಂಡು, ವಾಗ್ದಾಳಿ ನಡೆಸಿದವು.



ಮಂಗಳವಾರ ರಾಜ್ಯಪಾಲರ ಭಾಷಣ ಮೇಲಿನ ಚರ್ಚೆ ವೇಳೆ ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ಸರ್ಕಾರದ ಸಾಧನೆಗಳನ್ನು ವಿವರಿಸುವ ವೇಳೆ ಹೈದರಾಬಾದ್-ಕರ್ನಾಟಕ ಭಾಗವು ಅಭಿವೃದ್ಧಿಇಲ್ಲದೆಒಂದುರೀತಿಯಲ್ಲಿಗುಲಾಮಗಿರಿಯಲ್ಲಿ ಇದ್ದಂತಿದ್ದವು. ಮುಖ್ಯಮಂತ್ರಿ ಯಡಿಯೂರಪ್ಪ ಅದನ್ನು ತೊಡೆದು ಹಾಕಿದ್ದಾರೆ ಎಂದು ಹೇಳಿದರು. 'ಗುಲಾಮಗಿರಿ' ಪದ ಬಳಕೆಗೆ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದರು. ಕಡತದಿಂದ ಆ ಪದವನ್ನು ತೆಗೆದುಹಾಕಬೇಕು ಎಂದು ಆಗ್ರಹಿಸಿದವು.

ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ರಾಜ್ಯದ ಅಭಿವೃದ್ಧಿಗಾಗಿ ಯಡಿಯೂರಪ್ಪ ಅವರ ಕಾರ್ಯವೈಖರಿ ಮತ್ತು ಸರ್ಕಾರದ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವ ವೇಳೆ, ಹೈದರಾಬಾದ್-ಕರ್ನಾಟಕ ಎಂಬ ಹೆಸರನ್ನು ಬದಲಿಸಿ ಕಲ್ಯಾಣ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಗಿದೆ. ಅನುದಾನದಲ್ಲಿಯೂ ಹೆಚ್ಚಳ ಮಾಡಲಾಗಿದೆ. ಹೈದರಾಬಾದ್-ಕರ್ನಾಟಕಕ್ಕೆ ಇದ್ದ ಗುಲಾಮಗಿರಿ ಸಂಕೇತವನ್ನು ತೊಡೆದು ಹಾಕಿದ್ದಾರೆ ಎಂದರು. ಗುಲಾಮಗಿರಿ ಪದಕ್ಕೆ ಜೆಡಿಎಸ್ ಸದಸ್ಯ ನಾಡಗೌಡ ವೆಂಕಟರಾವ್ ಆಕ್ಷೇಪ ವ್ಯಕ್ತಪಡಿಸಿದರು. ಆ ಪದವನ್ನು ಕಡತದಿಂದ ತೆಗೆದು ಹಾಕಿಸಬೇಕು ಎಂದು ಆಗ್ರಹಿಸಿದರು. ಗುಲಾಮಗಿರಿ ವರ್ಣನೆಯಲ್ಲಿಯೇ ನಿಮಗೆ ಆ ಭಾಗದ ಬಗ್ಗೆ ಇರುವ ಅಭಿಪ್ರಾಯ ತಿಳಿಯುತ್ತದೆ ಎಂದು ಟೀಕಾಪ್ರಹಾರ ನಡೆಸಿದರು. ನಾಡಗೌಡ ಆಕ್ಷೇಪಕ್ಕೆ ಜೆಡಿಎಸ್-ಕಾಂಗ್ರೆಸ್‌ನ ಜತೆಗೂಡಿದರು.

7